ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7
Total No. of Questions : 26 ] [ Total No. of Printed Pages : 7

**ಸಂಕೇತ ಸಂಖ್ಯೆ : 104-K (NS)**

**Code No. : 104-K (NS)**

# ಡಿ.ಇಡಿ. ಪ್ರಥಮ ವರ್ಷ

## D.Ed. FIRST YEAR

# ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ

# FACILITATING LEARNING ( LPS )
# FIRST LANGUAGE — KANNADA

**(ಹೊಸ ಪಠ್ಯವಸ್ತು)**
**(New Syllabus)**

ದಿನಾಂಕ : 07. 01. 2020 ]
Date : 07. 01. 2020 ]

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60
Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** $10 \times 1 = 10$

1. ಭಾಷೆಯ ಪ್ರಮುಖ ಗುಣ

(A) ತಟಸ್ಥ

(B) ಬದಲಾವಣೆ

(C) ಇತಿಮಿತಿ

(D) ಕನಿಷ್ಠತೆ

2. ಅನೇಕ ಕನ್ನಡಗಳನ್ನೆಲ್ಲಾ ಸಮನ್ವಯಗೊಳಿಸುವುದು ...................... ಕನ್ನಡವಾಗಿದೆ.

(A) ಹಳ್ಳಿಗಾಡಿನ (B) ಮೈಸೂರಿನ

(C) ಗ್ರಾಂಥಿಕವಾದ (D) ಧಾರವಾಡದ

3. ಮಾಧ್ಯಮಗಳು ಭಾಷೆಯ ಮೂಲಕ ಮಾಹಿತಿಯನ್ನು ........................ ರೀತಿಯಲ್ಲಿ ಬಿತ್ತರಿಸುತ್ತಿರುತ್ತಾರೆ.

(A) ನೀರಸ (B) ಆಕರ್ಷಣೀಯ

(C) ವ್ಯತಿರಿಕ್ತ (D) ಕನಿಷ್ಠ

4. ಜ್ಞಾನಾತ್ಮಕ ಬೆಳವಣಿಗೆಗೂ ಭಾಷಾ ಬೆಳವಣಿಗೆಗೂ ನಿಕಟ ........................ ಇದೆ.

(A) ದಾರಿ (B) ಭಿನ್ನತೆ

(C) ವ್ಯತ್ಯಾಸ (D) ಸಂಬಂಧ

5. ಭಾಷಾ ಅಭಿರುಚಿ ಬೆಳೆಸುವುದಕ್ಕೆ ಸಮರ್ಥ ಶಿಕ್ಷಕರ ಜೊತೆಗೆ ........................ ಸಂಪನ್ಮೂಲಗಳ ಅವಶ್ಯಕತೆ ಇರುತ್ತದೆ.

(A) ಏಕರೀತಿಯ (B) ಆಡಂಬರದ

(C) ಅತೀ ಹೆಚ್ಚು (D) ವೈವಿಧ್ಯಮಯ

6. ಕುಟುಂಬದ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲ್ಪಡುವ ಭಾಷೆ

(A) ಶಾಲಾ (B) ಮಾತೃ

(C) ಪ್ರಥಮ (D) ದ್ವಿತೀಯಾ

7. ಭಾಷಾ ಅನುಭವ ಹಾಗೂ ಜೀವನಾನುಭವ ವ್ಯಕ್ತಿಯಲ್ಲಿ ........................ ಆಗಿದೆ.

(A) ಸಮ್ಮಿಳಿತ (B) ವಿಭಿನ್ನ

(C) ಬೇರೆ ಬೇರೆ (D) ದ್ವಂದ್ವ

8. ಆಟ ಹಾಗೂ ಕಲಿಕೆಯ ಪಾರಸ್ಪರಿಕ ಸಂಬಂಧಗಳನ್ನು ವಿಶ್ಲೇಷಿಸುವಾಗ ಹುಡುಗಾಟವು ಸಂಬಂಧಿಸಿರುವುದು

(A) ಆಟಕ್ಕಾಗಿ ಕಲಿಕೆ

(B) ಆಟಕ್ಕಾಗಿ ಆಟ

(C) ಆಟದಿಂದ ಕಲಿಕೆ

(D) ಕಲಿಕೆಗಾಗಿ ಕಲಿಕೆ

9. ಭಾಷೆಯ ಮೂಲ ಅಸ್ತಿತ್ವ ಇದ್ದುದು ......................... ರೂಪದಲ್ಲಿ

(A) ದಾರ್ಶನಿಕ

(B) ತಾರ್ಕಿಕ

(C) ಮೌಖಿಕ

(D) ಲಿಖಿತ

10. ಪ್ರತೀ ಕಲಿಕಾ ಸನ್ನಿವೇಶಕ್ಕೆ ಶಿಕ್ಷಕರು ತೆಗೆದುಕೊಳ್ಳಬೇಕಾದ ಬೋಧನಾ ನಿರ್ಧಾರಗಳೆಂದರೆ

I. ಉದ್ದೇಶಗಳ ಸ್ಪಷ್ಟತೆ

II. ಅನುಭವಗಳ ರೂಪುರೇಷೆ

III. ತರಗತಿಯ ಮೌನ

*ಇವುಗಳಲ್ಲಿ :*

(A) I ಮತ್ತು II ಮಾತ್ರ ಸರಿ

(B) II ಮತ್ತು III ಮಾತ್ರ ಸರಿ

(C) III ಮತ್ತು I ಮಾತ್ರ ಸರಿ

(D) ಇವುಗಳೆಲ್ಲವೂ.

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** 5 × 2 = 10

11. ಈ ಕೆಳಗಿನ ಪದ್ಯದ ಸಾಲುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬರೆಯಿರಿ.

    i) ಕೋ ಎನ್ನುತ ಕೊಳವು

    ii) ಮಿದುವಾಯಿತು ನೆಲವು

    iii) ಎಲ್ಲಿ ನೋಡಿದರೂ ಬೆಳದಿಂಗಳ ಮಳೆ

    iv) ಹಾಲಿನ ಬಟ್ಟಲ ಎತ್ತಿ ಹಿಡಿಯುತ್ತಿದೆ

12. ಮೌನ ಓದಿಗೂ ಮತ್ತು ಗಟ್ಟಿ ಓದಿಗೂ ಇರುವ ಯಾವುದಾದರೂ ನಾಲ್ಕು ವ್ಯತ್ಯಾಸಗಳನ್ನು ತಿಳಿಸಿ.

13. ಆರಂಭಿಕ ಹಂತಗಳಲ್ಲಿ ಮಕ್ಕಳಿಗೆ ಅಕ್ಷರ ಪದಗಳ ಪರಿಚಯ ಮಾಡಿಸುವುದರ ಯಾವುದಾದರೂ ನಾಲ್ಕು ಅಗತ್ಯತೆಗಳನ್ನು ಬರೆಯಿರಿ.

14. ಮಗುವಿನ ಮಾತು ಸಂಪನ್ಮೂಲವಾಗಬೇಕಾದರೆ ತರಗತಿಯಲ್ಲಿ ನೀವು ಹೇಗೆ ಅನುಕೂಲಿಸುವಿರಿ ?

15. ಮನೆಭಾಷೆಗೂ ಶಾಲಾಭಾಷೆಗೂ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

16. ಹತ್ತು ವರ್ಷದ ಹಿಂದಿನ ಚಲನಚಿತ್ರಗಳ ಭಾಷೆಗಿಂತ ಈಗಿನ ಚಲನ ಚಿತ್ರಗಳ ಭಾಷೆ ಭಿನ್ನ ಏಕೆ ?

17. ಭಾಷೆಯ ಕಲಿಕೆಯಲ್ಲಿ ಚಿಂತನಶೀಲತೆ ಹಾಸುಹೊಕ್ಕಾಗಿ ಬರಬೇಕಾದರೆ ಕೈಗೊಳ್ಳಬೇಕಾದ ನಾಲ್ಕು ಕ್ರಮಗಳನ್ನು ಪಟ್ಟಿಮಾಡಿ.

18. ಓದುವ ಕೌಶಲ ಒಳಗೊಳ್ಳುವ ಯಾವುದಾದರೂ ನಾಲ್ಕು ಉಪಕೌಶಲಗಳನ್ನು ಪಟ್ಟಿಮಾಡಿ.

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಮತ್ತು 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಎರಡು ಪುಟಕ್ಕೆ ಮೀರದಂತೆ ಉತ್ತರಿಸಿ :** 8 × 5 = 40

19. ಅ) ಕಿರಿಯ ಪ್ರಾಥಮಿಕ ಹಂತದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಜಿ.ಪಿ. ರಾಜರತ್ನಂರವರ ಯಾವುದಾದರೂ ಎರಡು ಶಿಶುಗೀತೆಗಳ ಬರೆಯಿರಿ.

*ಅಥವಾ*

ಆ) ನೀವು ಸಮೀಕ್ಷೆ ಮಾಡಿದ ಯಾವುದಾದರೂ ಎರಡು ಪ್ರಕಾಶನ ಮಾರುಕಟ್ಟೆಗಳು ಪ್ರಕಟಿಸಿರುವ ಐದೈದು ಪುಸ್ತಕಗಳನ್ನು ಹೆಸರಿಸಿ.

20. ಅ) ನೀವು ಓದಿರುವ ಒಂದು ನೀತಿ ಪ್ರಧಾನವಾದ ಕಥೆಯನ್ನು ೩೦ ವಾಕ್ಯಗಳಲ್ಲಿ ಬರೆಯಿರಿ.

***ಅಥವಾ***

ಆ) ಕಥೆ ಹೇಳುವುದರಿಂದ ಉಂಟಾಗುವ ಲಾಭಗಳಾವುವು ? ಸಂಕ್ಷಿಪ್ತವಾಗಿ ವಿವರಿಸಿ.

21. ಅ) ಪ್ರಾಥಮಿಕ ಹಂತದಲಿ ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿಯಲ್ಲಿ ಎದುರಾಗುವ ಯಾವುದಾದರೂ ಐದು ಸಮಸ್ಯೆಗಳನ್ನು ಹಾಗೂ ಅವುಗಳಿಗೆ ಪರಿಹಾರೋಪಾಯಗಳನ್ನು ತಿಳಿಸಿ.

***ಅಥವಾ***

ಆ) ಆಟದಿಂದ ಕಲಿಕೆಯಾಗಬಹುದಾದ ಯಾವುದಾದರೂ ಐದು ಆಟಗಳನ್ನು ಹೆಸರಿಸಿ. ಅವುಗಳಿಂದ ಉಂಟಾಗುವ ಕಲಿಕಾ ಸಾಮರ್ಥ್ಯಗಳನ್ನು ಸ್ಪಷ್ಟಪಡಿಸಿ.

22. ಅ) ಈ ಕೆಳಗಿನ ಪದ್ಯಭಾಗವನ್ನು ಗದ್ಯಭಾಗಕ್ಕೆ ರೂಪಾಂತರಿಸಿ :

ಕಾಣದ ಊರಿಗೆ ದಾರಿಯು ನೂರು
ತೋರುವರಾರು ಹೇಳಯ್ಯಾ
ನೋಡುವ ನೋಟಕ್ಕೆ ಬೆರಗಾದೆನು ನಾ
ಕಾರಣ ತಿಳಿಯದು – ತಿಳಿಸಯ್ಯ
ಉಣ್ಣದ ಬಾಯಿಗೆ ಸವಿ ನೂರಾರು
ಉಣಿಸುವರಾರೂ ಕಾಣಯ್ಯ
ನುಡಿಯದ ವೀಣೆಗೆ ರಾಗವು ನೂರು
ನುಡಿಸುವ ನೆಲ್ಲಿಹ ತೋರಯ್ಯ
ಕಾಯಕ ಮಾಡದ ಜೀವಿಗೆ ಅನ್ನದ
ದಾನವ ಕೊಡುವರು ಯಾರಯ್ಯ.

***ಅಥವಾ***

ಆ) ಈ ಕೆಳಗಿನ ಯಾವುದಾದರೊಂದು ಘಟನೆಗೆ ಸಂಬಂಧಿಸಿದಂತೆ ಸರಳ ಸಂಭಾಷಣೆಯನ್ನು ಬರೆಯಿರಿ :

i) ಇಬ್ಬರು ಬೈಕಿನ ಸವಾರರು ತಮ್ಮ ತಮ್ಮ ಬೈಕುಗಳಿಗೆ ಆಕಸ್ಮಿಕವಾಗಿ ಡಿಕ್ಕಿ ಹೊಡೆದಾಗ.

ii) ಬಸ್ಸಿನಲ್ಲಿ ಪ್ರಯಾಣಿಕರು ನಿರ್ವಾಹಕರಿಗೆ ಸರಿಯಾದ ಚಿಲ್ಲರೆ ಕೊಡದೇ ಇದ್ದಾಗ.

23. ಅ) ಉಕ್ತಲೇಖನದ ಚಟುವಟಿಕೆಯನ್ನು ಒಂದು ಸಮಗ್ರ ಭಾಷಾ ಕಲಿಕೆಯ ಚಟುವಟಿಕೆಯಾಗಿ ನೀಡಬಹುದೇ ? ನಿಮ್ಮ ಅಭಿಪ್ರಾಯಗಳನ್ನು ಕಾರಣೀಕರಿಸಿ.

***ಅಥವಾ***

ಆ) ಓದುವವರಿಗೆ ಓದುವ ಉದ್ದೇಶ ಕುರಿತಂತೆ ಸ್ಪಷ್ಟತೆ ಇರುವುದು ಅಗತ್ಯವೇ ? ಈ ಹೇಳಿಕೆಯನ್ನು ಸಮರ್ಥಿಸಿ.

24. ಅ) ನೀವು ವೀಕ್ಷಿಸಿದಂತೆ ನಲಿ–ಕಲಿ ಪದ್ಧತಿಯ ತರಗತಿ ಪ್ರಕ್ರಿಯೆಗಳನ್ನು ಉದಾಹರಣೆಸಹಿತ ವಿವರಿಸಿ.

***ಅಥವಾ***

ಆ) ಪ್ರಾರಂಭಿಕ ಸಾಕ್ಷರತೆ ಮಹತ್ವ ಕುರಿತಂತೆ ಯುನೆಸ್ಕೋ ಮತ್ತು ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್ ತಿಳಿಸುವ ವ್ಯಾಖ್ಯಾನಗಳನ್ನು ಬರೆಯಿರಿ.

25. ಅ) ಈ ಕೆಳಗೆ ನೀಡಿರುವ ಭಾಷಾ ಆಟಗಳಂತೆ ಐದು ನಮೂನೆಗಳನ್ನು ರಚಿಸಿ :

i) ನವ ರಾತ್ರಿ
ರಾತ್ರಿ ರಾಣಿ

ii) ಸೀಸದ ಕಡ್ಡಿ
ಕಡ್ಡಿ ಹುಳು

***ಅಥವಾ***

ಆ) ಈ ಕೆಳಗೆ ನೀಡಿರುವ ಮಾದರಿ ಆಟದಂತೆ ಇನ್ನೊಂದು ಹೊಸ ಆಟವನ್ನು ರಚಿಸಿ :



26. ಅ) ಕನ್ನಡ ಭಾಷಾ ತರಗತಿಯು ಒಳಗೊಳ್ಳುವ ತರಗತಿ ಎನಿಸಿಕೊಳ್ಳಬೇಕಾದರೆ ಅದು ಹೊಂದಿರಬೇಕಾದ ಗುಣಲಕ್ಷಣಗಳಾವುವು ?

***ಅಥವಾ***

ಆ) "ಒಳಗೊಳ್ಳುವಿಕೆಯ ಒಂದು ಮುಖ್ಯ ಆಯಾಮ ಬಳಸುವ ಭಾಷೆ." ಉದಾಹರಣೆಯೊಂದಿಗೆ ಚರ್ಚಿಸಿ.